

# ಜಾಣೆ ಜಾಕ್ವೆಲಿನ್

ಜಾಕ್ವೆಲಿನ್ ಫೆರ್ನಾಂಡಿಸ್ ಜತೆಗೆ ಸಖ್ಯ ಬೆಳೆಸಿಕೊಳ್ಳಲು ರಣಬೀರ್ ಕಪೂರ್ ನಡೆಸುತ್ತಿರುವ ಯತ್ನಗಳೆಲ್ಲ ವಿಫಲವಾಗಿದ್ದೇಕೆ.. ಎನ್ನುವುದೀಗ ಬಾಲಿವುಡ್ ಪಂಡಿತರನ್ನು ಕಾಡುತ್ತಿರುವ ಜಟಿಲ ಪ್ರಶ್ನೆ. ಬಾಲಿವುಡ್‌ನ ಸುರಸುಂದರಾಂಗ ರಣಬೀರ್, ಈ ಹಿಂದೆ ಹಲವಾರು ನಟಿಯರ ಜತೆ ನಿಕಟ ಸ್ನೇಹ ಬೆಳೆಸಿಕೊಂಡರೂ ಜಾಕ್ವೆಲಿನ್ ಆತನ ಜತೆಗೆ ನಿಕಟಸ್ನೇಹ ಬೆಳೆಸಲು ಒಪ್ಪುತ್ತಿಲ್ಲವಂತೆ. ಇತ್ತೀಚೆಗೆ ಗುವಾಹಟಿಯಲ್ಲಿ ಫುಟ್‌ಬಾಲ್ ಕ್ಲಬ್ ಒಂದರ ಸಮಾರಂಭಕ್ಕೆ ರಣಬೀರ್ ಸಿನಿಮಿತ್ರರ ಜತೆಗೂಡಿ ತೆರಳಿದ್ದಾಗ ಜಾಕ್ವೆಲಿನ್ ಕೂಡಾ ಜೊತೆಗಿದ್ದಳು. ಇಡೀ ದಿನದ ಕಾರ್ಯಕ್ರಮದಲ್ಲಿ ಜಾಕ್ವೆಲಿನ್‌ಳನ್ನು 'ಇಂಪ್ರೆಸ್' ಮಾಡಲು ರಣಬೀರ್ ಶತಪ್ರಯತ್ನ ಮಾಡಿದರೂ ಅದು ಫಲ ನೀಡಲಿಲ್ಲವಂತೆ.

'ರಾಯ್' ಚಿತ್ರದಲ್ಲಿ ಇಬ್ಬರೂ ಒಟ್ಟಿಗೆ ನಟಿಸಿದ್ದು ಹಳೆಯ ಕಥೆ. ಆದರೆ ರಣಬೀರ್‌ಗೆ ಅವತ್ತಿನಿಂದಲೇ ಜಾಕ್ವೆಲಿನ್ ಜತೆಗೆ ನಿಕಟ ಸ್ನೇಹ ಬೆಳೆಸಿಕೊಳ್ಳಬೇಕೆಂಬ ಮನಸ್ಸಿತ್ತಂತೆ. 'ಎಲ್ಲಾದರೂ ದೂರ ಹೋಗಿ ಕುಳಿತು ಡಿನ್ನರ್ ಮಾಡೋಣ' ಎಂದು ರಣಬೀರ್ ಜಾಕ್ವೆಲಿನ್ ಗೆ ಪದೇ ಪದೇ ಮೊಬೈಲ್ ಸಂದೇಶ ಕಳಿಸಿದರೂ, ಆಕೆ ಒಪ್ಪಿಕೊಂಡಿಲ್ಲವಂತೆ. ಇದ್ಯಾಕೆ ಜಾಕ್ವೆಲಿನ್ ಇಷ್ಟೊಂದು ಕಠಿಣವಾಗಿ ವರ್ತಿಸುತ್ತಾಳೆಂದು ಕಾರಣ ಕಂಡು ಹುಡುಕಲು ಹೊರಟರೆ ಸುದ್ದಿ ಪಂಡಿತರಿಗೆ ಗೊತ್ತಾದದ್ದು ಸಲ್ಮಾನ್ ಖಾನ್ ಪ್ರಭಾವ! ಸಲ್ಮಾನ್ ಖಾನ್‌ನ 'ಬಿಯಿಂಗ್ ಹ್ಯೂಮನ್' ಸೌಂದರ್ಯ ಉತ್ಪನ್ನಗಳಿಗೆ 'ಬ್ರ್ಯಾಂಡ್ ಅಂಬಾಸಿಡರ್' ಆಗಿ ಆಯ್ಕೆಯಾಗಿರುವ ಜಾಕ್ವೆಲಿನ್, ರಣಬೀರ್ ಜತೆ ನಿಕಟವಾದರೆ ಸಲ್ಮಾನ್‌ಗೆ ಸಿಟ್ಟು ಬರಬಹುದು ಎಂದು ಊಹಿಸಿ ಹಿಂದೇಟು ಹೊಡೆಯುತ್ತಿದ್ದಾಳೆ ಎನ್ನುವುದು ಇದೀಗ ಪತ್ರಕರ್ತರ ಊಹೆ.

ಆಗಸ್ಟ್ 11ರಂದು ತನ್ನ 32ನೇ ಹುಟ್ಟುಹಬ್ಬ ಆಚರಿಸಲಿರುವ ಈ ಶ್ರೀಲಂಕನ್ ಸುಂದರಿ, ತನ್ನ ದೇಶದಲ್ಲಿ ಮಾಡೆಲಿಂಗ್ ಮಾತ್ರವಲ್ಲದೆ ಟೀವಿ ಕಾರ್ಯಕ್ರಮ ನಿರ್ವಾಹಕಿಯಾಗಿಯೂ ಸುದ್ದಿ ಮಾಡಿದವಳು. ಒಂದು ಮಗುವಿನ ತಾಯಿಯೂ ಆಗಿರುವ ಈಕೆ 'ಮರ್ಡರ್2', 'ಹೌಸ್‌ಫುಲ್2', 'ರೇಸ್2' ಮುಂತಾದ ಚಿತ್ರಗಳಲ್ಲಿ ನಟಿಸಿ ಸಾಕಷ್ಟು ಮಿಂಚಿದಾಕೆ. ಈಗ 'ಜುಡ್ವಾ 2' ಚಿತ್ರದಲ್ಲೂ ಹೀರೋಯಿನ್. 'ಕಿಕ್' ಮತ್ತು 'ಡಿಶೂಂ' ಈಕೆಗೆ ಹೆಸರು ತಂದುಕೊಟ್ಟ ಇನ್ನೆರಡು ಚಿತ್ರಗಳು.

2017ರಲ್ಲಿ ಇನ್ನಷ್ಟು ಸಿನಿಮಾಗಳನ್ನು ಒಪ್ಪಿಕೊಂಡಿರುವ ಜಾಕ್ವೆಲಿನ್‌ಗೆ ಶ್ರೀಲಂಕಾದಲ್ಲಿರುವ ಕುಟುಂಬದ ಜತೆಗೆ ಸಮಯ ಕಳೆಯಲೂ ಪುರುಸೊತ್ತಿಲ್ಲವಂತೆ. ಸಿದ್ಧಾರ್ಥ ಮಲ್ಹೋತ್ರಾ ಮತ್ತು ಸುಶಾಂತ್‌ಸಿಂಗ್ ರಜಪೂತ್ ನಟಿಸುವ ಹೊಸ ಎರಡು ಚಿತ್ರಗಳ ಕಡೆಗೆ ಈಗ ಆಕೆ ಪೂರ್ಣ ಗಮನ ಕೇಂದ್ರೀಕರಿಸಿದ್ದಾಳೆ. ಇನ್ನು ರಣಬೀರ್ ಕಡೆ ಗಮನಹರಿಸಲು ಸಾಧ್ಯವೆ?

# ದೀಪಿಕಾ ಬಿಂದಾಸ್

ಕತಾರಿಮೀಸೆಯ ಕುವರ ರಣ್‌ವೀರ್‌ಸಿಂಗ್ ತನ್ನ ಬಾಯ್‌ಫ್ರೆಂಡ್ ಹೌದು ಎಂದು ದೀಪಿಕಾ ಪಡುಕೋಣೆ ಕೊನೆಗೂ ಸಂದರ್ಶನವೊಂದರಲ್ಲಿ ಒಪ್ಪಿಕೊಂಡಿದ್ದಾಳೆ. ರಣ್‌ವೀರ್ ಈ ಸಂದರ್ಶನ ಓದಿ ಖುಷಿಯಿಂದ ಉಬ್ಬಿದ್ದರೆ, ದೀಪಿಕಾಳ ಮಾಜಿ ಗೆಳೆಯ ರಣಬೀರ್ ಕಪೂರ್ ಸ್ವಲ್ಪ ಮಟ್ಟಿಗೆ ನಿರಾಶೆಗೊಂಡಿರುವ ಸುದ್ದಿ ಬಂದಿದೆ.

ಅಂದ ಹಾಗೆ ಮಾಜಿ ಗೆಳೆಯ ರಣಬೀರ್ ಜತೆಗೂ ಹೊಸ ಚಿತ್ರಕ್ಕೆ ಸಹಿ ಹಾಕಿ ತನ್ನ ವೃತ್ತಿಪರತೆ ಮೆರೆದಿರುವ ದೀಪಿಕಾ, ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುವಾಗಲೂ ಬಿಂದಾಸ್ ಆಗಿ ವರ್ತಿಸುತ್ತಿದ್ದಾಳೆ. 'ನೀವು ಮಾಜಿ ಗೆಳೆಯ ರಣಬೀರ್ ಜತೆಗೆ ನಟಿಸುತ್ತಿರುವುದು ಹಾಲಿ ಬಾಯ್‌ಫ್ರೆಂಡ್ ರಣ್‌ವೀರ್‌ಗೆ ಕಿರಿಕಿರಿ ಉಂಟು ಮಾಡುವುದಿಲ್ಲವೆ?' ಎಂದು ಸಂದರ್ಶನದಲ್ಲಿ ಪ್ರಶ್ನೆ ಎದುರಾದಾಗ, ಜಾಣೆ ದೀಪಿಕಾ, 'ಈ ಪ್ರಶ್ನೆಯನ್ನು ನನ್ನ ಬಾಯ್‌ಫ್ರೆಂಡ್‌ಗೇ ಕೇಳಿದರೆ ಒಳ್ಳೆಯದು' ಎಂದಿದ್ದಾಳೆ! ನಾನಂತೂ ಸಂಬಂಧಗಳ ವಿಷಯದಲ್ಲಿ ಮುಕ್ತವಾಗಿದ್ದೇನೆ. ಯಾವ ಮುಚ್ಚುಮರೆಯನ್ನೂ ಮಾಡೋದಿಲ್ಲ ಎಂದೂ ಪ್ರಶ್ನೆ ಕೇಳಿದವರ ಬಾಯಿ ಮುಚ್ಚಿಸಿದ್ದಾಳೆ ಬಿಂದಾಸ್ ದೀಪಿಕಾ.

